**ದಿನಾಂಕಃ 22-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 3 ನೇ ಪ್ರತಿವಾದಿಗಳ ಪರ ವಕೀಲರಿಂದ**

ನಾನು ಈಗ ಕರೂರು ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ನನ್ನ ಜನನವಾದಾಗಿನಿಂದ ಅದೇ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಸರ್ವೆ ನಂಬ್ರ 90/2 ಎ ಇದು ಶಿವಪುತ್ರಪ್ಪ ಕವಳಿಕಾಯಿ ಇವರಿಗೆ ಸಂಬಂಧಿಸಿದ ಜಮೀನು ಆಗಿರುತ್ತದೆ. ಆತ ನನಗೆ ದೊಡ್ಡಪ್ಪನಾಗಬೇಕು ಅಂದರೆ ನನ್ನ ತಂದೆಯ ಅಣ್ಣ. ಈಗ ಅದು ದ್ಯಾಮವ್ವ ಶಿವಪುತ್ರಪ್ಪ ಕವಳಿಕಾಯಿ ಇವರ ಹೆಸರಿನಲ್ಲಿ ಚಾಲ್ತಿಯಲ್ಲಿದೆ. ಸರ್ವೆ ನಂಬ್ರ 90/2 ಬಿ ಆಸ್ತಿ ಶಿವಪುತ್ರಪ್ಪ ಮತ್ತು ವಿರುಪಾಕ್ಷಪ್ಪ ಇಬ್ಬರೂ ಜಂಟಿಯಾಗಿ ಹಿಡಿದ ಆಸ್ತಿಯಾಗಿರುತ್ತದೆ. ಆ ಸಮಯದಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ಕುರಿ ಸಾಕಾಣಿಕೆ ಮಾಡುತ್ತಿದ್ದರು. ಅದರಿಂದ ಬಂದ ಆದಾಯದಿಂದ ಸದ್ರಿ ಆಸ್ತಿಯನ್ನು ಖರೀದಿಸಿರುತ್ತಾರೆ. ನನ್ನ ದೊಡ್ಡಪ್ಪ ಕೂಡ ಕುರಿ ಕಾಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

2. ನಮ್ಮ ಪಿತ್ರಾರ್ಜಿತ ಆಸ್ತಿ ಕ್ಷೇತ್ರ 28 ಗುಂಟೆ ಮರಡಿ ಜಮೀನು ಇದ್ದು ಅದರಿಂದ ಯಾವುದೇ ಆದಾಯ ಬರುತ್ತಿರಲಿಲ್ಲ ಎಂದರೆ ಸರಿ ಅಲ್ಲ. ನನ್ನ ತಂದೆ ಚಿಕ್ಕವನಿದ್ದಾಗಿನಿಂದ ಕುರಿ ಕಾಯುತ್ತ ಊರೂರು ಅಲೆದಾಡುತ್ತಿದ್ದ ಎಂದರೆ ಸರಿ ಅಲ್ಲ. ನನ್ನ ತಂದೆ ಯಾವತ್ತೂ ಕರೂರು ಗ್ರಾಮದಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿ ಅಲ್ಲ. ನಾನು ಲಿಂಗಾಪುರ ಗ್ರಾಮದ ಡಾ.ಹಂಡೆ ಇವರ ಜಮೀನಿನಲ್ಲಿ ಕೆಲಸ ಮಾಡುತ್ತ ಬಂದಿರುತ್ತೇನೆ ಎಂದರೆ ಸರಿ ಅಲ್ಲ. ನಾನು ವರಹಾ ಗ್ರಾಮದಲ್ಲಿ ಮದುವೆಯಾಗಿದ್ದು ಅಲ್ಲಿಯೇ ವಾಸವಾಗಿರುತ್ತೇನೆ ಎಂದರೆ ಸರಿ ಅಲ್ಲ. ಕೂಡು ಕುಟುಂಬದಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ಲೆಕ್ಕಪತ್ರ ಇಟ್ಟ ಬಗ್ಗೆ ಗೊತ್ತಿಲ್ಲ. ಎಲ್ಲ ವ್ಯವಹಾರ ನನ್ನ ತಂದೆ ಮಾಡುತ್ತಿದ್ದ ಕಾರಣ ನಾನು ಲೆಕ್ಕಪತ್ರ ಇಟ್ಟಿಲ್ಲ. ನನ್ನ ತಂದೆ ಯಾವುದೇ ಲೆಕ್ಕಪತ್ರ ಇಟ್ಟಿರಲಿಲ್ಲ.

3. ನಾವು ಚಿಕ್ಕವರಿದ್ದಾಗ ನನ್ನ ತಂದೆ ಮತ್ತು ದೊಡ್ಡಪ್ಪ ಬೇರೆಯಾಗಿರುತ್ತಾರೆ ಆ ಕುರಿತು

ನನಗೆ ಮಾಹಿತಿ ಇರುವುದಿಲ್ಲ. ನಮ್ಮ ಕುಟುಂಬದಲ್ಲಿ ಎತ್ತು, ಬೆಳೆ ಸಾಮಾನು, ಚಕ್ಕಡಿ ಇರುತ್ತವೆ. ಸದ್ರಿ ಟ್ರ್ಯಾಕ್ಟರ್ ಇದ್ದು, ಅದು 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ಟ್ರ್ಯಾಕ್ಟರನ್ನು ಬ್ಯಾಂಕ್‌ನಲ್ಲಿ ಸಾಲ ಮಾಡಿ ಪಡೆದುಕೊಂಡಿದ್ದು ಇರುತ್ತದೆ. ಸಾಲ ಎಷ್ಟು ಮಾಡಿದ್ದರು ಮತ್ತು ಯಾರು ತೀರಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಅದನ್ನು ನನ್ನ ತಮ್ಮ ನೋಡಿಕೊಳ್ಳುತ್ತಿದ್ದ.

4. ನಮ್ಮ ಮನೆಯ ಯಜಮಾನಿಕೆಯನ್ನು ನನ್ನ ತಂದೆ ತೀರಿಕೊಂಡ ನಂತರ ನನ್ನ ತಮ್ಮ 3 ನೇ ಪ್ರತಿವಾದಿ ಮಾಡುತ್ತಿದ್ದ. ಸರ್ವೆ ನಂಬ್ರ 90/2 ಬಿ ನೇದ್ದರ ಆಸ್ತಿಯ ಮೇಲೆ ಎಷ್ಟು ಸಾಲ ಇತ್ತು ಮತ್ತು ಯಾರು ತೀರಿಸಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ತಂದೆಯ ಆಸ್ತಿಯ ಮೇಲೆ ಎಷ್ಟು ಸಾಲ ಇತ್ತು ಎಂದು ನನ್ನ ತಂದೆ ಹೇಳಿಲ್ಲ ಮತ್ತು ಯಾವುದೇ ಸಾಲ ಇರಲಿಲ್ಲ. ದಾವಾ ಆಸ್ತಿಯ ಮೇಲೆ ಕೆವಿಜಿ ಬ್ಯಾಂಕ್ ನ ಸಾಲ ಇತ್ತು ಎಂದರೆ ನಿಜ. ಸಾಲ ಇತ್ತು ಎಂದು ಹೇಳುವ ವಿಷಯ ಸತ್ಯವಾಗಿದೆ. ಸದ್ರಿ ಸಾಲವನ್ನು ಯಾರು ತೀರಿಸಿದರು ಎಂದು ಹೇಳಲು ಬರುವುದಿಲ್ಲ. ಅದು ಒಟ್ಟು 8 ಲಕ್ಷ 40 ಸಾವಿರ ಸಾಲ ಮತ್ತು ಬಡ್ಡಿ ಇತ್ತು. ಬ್ಯಾಂಕ್‌ನ ವ್ಯವಸ್ಥಾಪಕರೊಂದಿಗೆ ಮಾತನಾಡಿ ಸಾಲ ಮನ್ನಾ ಆಗಿ ಕೇವಲ 1 ಲಕ್ಷ ಸಾಲವನ್ನು ನನ್ನ ತಮ್ಮ ಹೋಗಿ ತುಂಬಿ ಬಂದಿರುತ್ತಾನೆ. 1 ಲಕ್ಷ ರೂಪಾಯಿ ಸಾಲ ಇತ್ತು ಮತ್ತು ಅಷ್ಟು ಹಣ ಹೋಗಿ ತುಂಬಿ ಬಂದಿರುತ್ತೇವೆ ಎಂದು ಹೇಳುವುದು ಸುಳ್ಳಿನಿಂದ ಕೂಡಿದೆ ಎಂದರೆ ಸರಿ ಅಲ್ಲ.

5. ನಮ್ಮ ಜಂಟಿ ಕುಟುಂಬಕ್ಕೆ ಇಷ್ಟು ಸಾಲ ಇತ್ತು ಎಂದು ನಾನು ದಾವೆಯಲ್ಲಿ ತೋರಿಸಿಲ್ಲ. ಸಾಲ ಮಾಡಿದ ಬಗ್ಗೆ ತೋರಿಸಲು ನನಗೆ ಯಾವುದೇ ತೊಂದರೆ ಇದ್ದಿರಲಿಲ್ಲ. ನಾನು ಮನೆತನದ ಹಿರಿತನವನ್ನು ಯಾವತ್ತೂ ಮಾಡಿಲ್ಲ. ಕುರಿಗಳು ಇದ್ದ ಬಗ್ಗೆ ದಾವೆಯಲ್ಲಿ ಬರೆಸಿಲ್ಲ. ಎಷ್ಟು ಕುರಿಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆ ಒಟ್ಟು 200 ಕುರಿಗಳ ಗುಂಪನ್ನು ಮಾಡಿದ್ದ ಎಂದರೆ ಸರಿ ಅಲ್ಲ. ಸದ್ರಿ ಜಮೀನುಗಳೆಲ್ಲವೂ ಈಗ ಕೂಡು ಕುಟುಂಬದಲ್ಲಿದ್ದು ಸಾಮೂಹಿಕವಾಗಿ ಕಬ್ಜಾ ವಹಿವಾಟು ಮಾಡುತ್ತಿದ್ದೇವೆ. ನನ್ನ ತಾಯಿಯ ಜೊತೆ ನಾನು ಒಂದೇ

ಶೆಡ್ಡಿನಲ್ಲಿ ವಾಸವಾಗಿದ್ದೇನೆ ಎಂದರೆ ಸರಿ ಅಲ್ಲ. ದಾವೆ ದಾಖಲು ಮಾಡುವ ಪೂರ್ವದಲ್ಲಿ ನನ್ನ ತಾಯಿಗೆ ಅಪಘಾತವಾಗಿತ್ತು ಎಂದರೆ ನಿಜ. ಸಾಕ್ಷಿ ಮುಂದುವರಿದು ಅದನ್ನು ನನ್ನ ತಮ್ಮ ಮಾಡಿದ್ದ ಆತನೇ ಎಲ್ಲ ಖರ್ಚನ್ನು ನೋಡಿಕೊಂಡಿದ್ದ ಎಂದು ನುಡಿಯುತ್ತಾರೆ. ದಾವಾ ಆಸ್ತಿ ನಂಬ್ರ 3 ಇದು 3ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ ಅಲ್ಲ. ಆ ಪ್ರಕಾರ ಮ್ಯುಟೇಷನ್ ಡೈರಿ ಮಂಜೂರಾಗಿದೆ ಎಂದರೆ ಸರಿ ಅಲ್ಲ. ಅದು ನಿಪಿ-5 ರಲ್ಲಿ ನಮೂದಾಗಿದೆ ಎಂದರೆ ಸರಿ ಅಲ್ಲ. ಸರ್ವೆ ನಂಬ್ರ 89/1+2 ನೇದ್ದರ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎನ್ನುವುದು ನನಗೆ ಮತ್ತು ನನ್ನ ತಾಯಿಗೆ ಗೊತ್ತಿದೆ ಎಂದರೆ ನಿಜ.

6. ದಾವಾ ಆಸ್ತಿ ನಂಬ್ರ 2 ಮತ್ತು 3 ಇವುಗಳು ನನ್ನ ತಂದೆ ಸ್ವಂತ ಗಳಿಸಿದ ಆಸ್ತಿ ಎಂದರೆ ನನ್ನ ತಂದೆ ಮತ್ತು ದೊಡ್ಡಪ್ಪ ಕೂಡಿ ಹಿಡಿದ ಆಸ್ತಿಗಳು ಎಂದು ಹೇಳುತ್ತಾರೆ. ಸದ್ರಿ ಆಸ್ತಿಗಳಲ್ಲಿ ನನ್ನ ಅಜ್ಜನ ಮಕ್ಕಳು ಕೂಡ ಜಂಟಿಯಾಗಿ ಸ್ವಾಧೀನದಲ್ಲಿ ಇದ್ದಾರೆ. ಸದ್ರಿ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ತೋರಿಸಿಲ್ಲ ಕಾರಣ ಅವಶ್ಯಕವಾಗಿರಲಿಲ್ಲ. ಅವರೂ ಕೂಡ ದಾವಾ ಆಸ್ತಿಗೆ ಮತ್ತು ಈ ದಾವೆಗೆ ಅವಶ್ಯಕ ಪಕ್ಷಗಾರರು ಇರುತ್ತಾರೆ ಎಂದರೆ ಸರಿ ಅಲ್ಲ. ಅವರು ತಮ್ಮ ಪ್ರತ್ಯೇಕ ಆಸ್ತಿಯನ್ನು ವಹಿವಾಟು ಮಾಡುತ್ತ ಬಂದಿರುತ್ತಾರೆ. ಅವರ ಹೆಸರಿನಲ್ಲಿ ಪ್ರತ್ಯೇಕವಾಗಿ ಹಿಸ್ಸೆ ಆಗಿರುವುದಿಲ್ಲ.

7. ದಾವಾ ತಕ್ಷೀರು ಆಸ್ತಿ ಇದು ಸರ್ಕಾರದಿಂದ ನನ್ನ ತಂದೆಗೆ ಮಂಜೂರಾದ ಆಸ್ತಿಯಾಗಿರುತ್ತದೆ. ಅದು ನನ್ನ ತಂದೆಯ ಹೆಸರಿನಲ್ಲಿ ಮಂಜೂರಾಗಿರುತ್ತದೆ. ಆ ಆಸ್ತಿ ನನ್ನ ತಂದೆಗೆ ಮಂಜೂರಾಗಿದ್ದರಿಂದ ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ನಿಜ. ಆ ಆಸ್ತಿಯಲ್ಲಿ ನಾನು ಚಿಕ್ಕವನಿದ್ದಾಗಿನಿಂದ ಅಲ್ಲಿ ಕೆಲಸ ಮಾಡುತ್ತ ಬಂದಿರುತ್ತೇನೆ. ನಾನು ಚಿಕ್ಕವನಿದ್ದಾಗ ಆ ಜಮೀನಿನಲ್ಲಿ ಕೆಲಸ ಮಾಡುತ್ತ ಬಂದಿರುತ್ತೇನೆ ಎಂದು ಹೇಳುವ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿ ಅಲ್ಲ.

8. ನನ್ನ ಮದುವೆ 2014 ರಲ್ಲಿ ಆಗಿದ್ದು, ನನ್ನ ತಂದೆ ಮಾಡಿರುತ್ತಾರೆ. ಸರ್ವೆ ನಂಬ್ರ

20/2 ಜಮೀನು ಮರಡಿ ಭೂಮಿ ಎಂದರೆ ಸರಿ ಅಲ್ಲ ಅದು ಫಲವತ್ತಾದ ಭೂಮಿ ಎಂದು ನುಡಿಯುತ್ತಾರೆ. ಆ ಜಮೀನಿನಲ್ಲಿ 3 ನೇ ಪ್ರತಿವಾದಿ ಖರ್ಚು ಮಾಡಿ ಜಮೀನನ್ನು ಫಲವತತ್ತತೆಯನ್ನಾಗಿ ಮಾಡಿರುತ್ತಾನೆ ಎಂದರೆ ಸರಿ ಅಲ್ಲ. ನನ್ನ ತಂದೆ ಎಲ್ಲ ಮಕ್ಕಳೊಂದಿಗೆ ಚೆನ್ನಾಗಿ ವಾಸವಾಗಿದ್ದ. ಸದ್ರಿ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ ನಾನು ಲಿಂಗಾಪುರ ಗ್ರಾಮದಲ್ಲಿ ವಾಸವಾಗಿದ್ದು, ಕಾರಣ 3 ನೇ ಪ್ರತಿವಾದಿ ತಂದೆ ತಾಯಿಯನ್ನು ಜೋಪಾನ ಮಾಡಿ ಸಾಕಿ ಸಲುಹಿರುತ್ತಾನೆ ಎಂದರೆ ಸರಿ ಅಲ್ಲ. ನನ್ನ ತಂದೆಗೆ ಪ್ರಾಪಂಚಿಕ ವ್ಯವಹಾರಿಕ ಜ್ಞಾನ ಹೆಚ್ಚಿಗೆ ಇತ್ತು ಆತ ಬಡ್ಡಿ ವ್ಯವಹಾರ ಕೂಡ ಮಾಡುತ್ತಿದ್ದ. ಆತ ಒಳ್ಳೆ ತಿಳವಳಿಕೆದಾರ ಇದ್ದ. ಆತನಿಗೆ ಯಾರಿಗೆ ಯಜಮಾನಿಕೆ ಕೊಡಬೇಕು ಕೊಡಬಾರದು ಎಂಬ ಬಗ್ಗೆ ಜ್ಞಾನ ಇತ್ತು. 1 ನೇ ಪ್ರತಿವಾದಿ ಮನೆತನದ ಯಜಮಾನಿಕೆ ಮಾಡುತ್ತಿರಲಿಲ್ಲ. ನಾನು ನನ್ನ ತಂದೆಗೆ 3 ನೇ ಮಗ. ನನ್ನ ತಂದೆ ಎಲ್ಲ ವ್ಯಹಾರವನ್ನು ನಮ್ಮ ನಾಲ್ಕೂ ಜನ ಮಕ್ಕಳೊಂದಿಗೆ ಚರ್ಚಿಸಿ ಮಾಡುತ್ತಿದ್ದ. ನಾನು ಯಾವುದೇ ಯಜಮಾನಿಕೆ ಮಾಡಿಲ್ಲ. ನನ್ನ ತಂದೆ ಯಾರ ಮಾತೂ ಕೇಳುತ್ತಿರಲಿಲ್ಲ ಆತ ಜಾಣನಿದ್ದ ಎಂದರೆ ಸರಿ ಅಲ್ಲ. ನನ್ನ ತಂದೆ 3 ನೇ ಪ್ರತಿವಾದಿಗೆ ಹೆಚ್ಚಿನ ಜವಾಬ್ದಾರಿ ಕೊಡುತ್ತಿದ್ದ ಎಂದರೆ ಸರಿ ಅಲ್ಲ. ನಮ್ಮ ನಾಲ್ಕೂ ಜನರಲ್ಲಿ 3 ನೇ ಪ್ರತಿವಾದಿ ಮೇಲೆ ಹೆಚ್ಚಿನ ನಂಬಿಕೆ ವಿಶ್ವಾಸ ಇತ್ತು ಎಂದರೆ ಸರಿ ಅಲ್ಲ. ಆತ ವಿದ್ಯಾಭ್ಯಾಸ ಮಾಡಿರುತ್ತಾನೆ ಎಂಬ ಕಾರಣಕ್ಕಾಗಿ ಆತನಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಟ್ಟಿದ್ದ.

ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.